**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ), ಬೆಂಗಳೂರು**
ನಂ:16–ಡಿ, ದೇವರಾಜ ಅರಸು ಭವನ, 4ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬಂಡ್ ರೋಡ್ ಏರಿಯಾ, ವಸಂತ ನಗರ, ಬೆಂಗಳೂರು–52.

# ***2020–21ನೇ ಸಾಲಿನ ಕಾರ್ಯನಿರ್ವಹಣಾ ವರದಿ***

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮವನ್ನು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 124 ಬಿಸಿಎ 2017, ದಿನಾಂಕ:18/05/2017 ಮತ್ತು 12/10/2017ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:31/10/2017ರಂದು ನೋಂದಾಯಿಸಿ ಸ್ಥಾಪಿಸಿದೆ. ಉಪ್ಪಾರ ಮತ್ತು ಇದರ ಉಪಜಾತಿಗಳ ಆರ್ಥಿಕಾಭಿವೃದ್ಧಿಗಾಗಿ ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುವ ಮತ್ತು ಸ್ವಯಂ ಉದ್ಯೋಗಕ್ಕೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಕೌಶಲ್ಯತೆ ಹೆಚ್ಚಿಸುವ ತರಬೇತಿ ನೀಡುವುದು ನಿಗಮದ ಉದ್ದೇಶವಾಗಿರುತ್ತದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ 2020–21ನೇ ಸಾಲಿನ ವಾರ್ಷಿಕ ವರದಿಯು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

1. ನಿಗಮದ ನಿರ್ದೇಶಕ ಮಂಡಳಿ
2. ನಿಗಮದ ಆಡಳಿತಾತ್ಮಕ ವ್ಯವಸ್ಥೆ.
3. 2020–21ನೇ ಸಾಲಿನ ಆಯವ್ಯಯ.
4. ಯೋಜನೆಗಳ ವಿವರಗಳು.
5. 2020–21ನೇ ಸಾಲಿನ ಕಾರ್ಯಕ್ರಮಗಳು ಪ್ರಗತಿ ತಃಖ್ತೆ.

## I. ನಿಗಮದ ನಿರ್ದೇಶಕ ಮಂಡಳಿ

ನಿಗಮದಲ್ಲಿ ಆಡಳಿತ ಮೇಲ್ವಿಚಾರಣೆ ಮತ್ತು ಕಾರ್ಯನೀತಿ ರೂಪಿಸಲು ನಿರ್ದೇಶಕ ಮಂಡಳಿಯು ಕಾರ್ಯನಿರ್ವಹಿಸುತ್ತಿದೆ. ಈ ನಿರ್ದೇಶಕ ಮಂಡಳಿಯಲ್ಲಿ ಈ ಕೆಳಕಂಡ ಸದಸ್ಯರು ನಿರ್ದೇಶಕರಾಗಿರುತ್ತಾರೆ.

| ಕ್ರ.ಸ | ಹೆಸರು | ಪದನಾಮ |
|---|---|---|
| 1 | ಶ್ರೀ ಜಿ.ಕೆ. ಗಿರೀಶ್ ಉಪ್ಪಾರ್,<br>ಅಧ್ಯಕ್ಷರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ | ಅಧ್ಯಕ್ಷರು |
| 2 | ಶ್ರೀಮತಿ ವಿ.ರಶ್ಮಿಮಹೇಶ್ ಭಾ.ಆ.ಸೇ.<br>ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ನಿರ್ದೇಶಕರು |
| 3 | ಶ್ರೀ ವಸಂತಕುಮಾರ್.ಪಿ ಐ.ಎ.ಎಸ್.<br>ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ನಿರ್ದೇಶಕರು |
| 4 | ಶ್ರೀ ಡಿ.ಎಸ್.ಸುದರ್ಶನ್ ಕುಮಾರ್<br>ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ಕಲ್ಯಾಣ) | ನಿರ್ದೇಶಕರು |
| 5 | ಶ್ರೀಮತಿ ಸಿ.ಹೇಮಲತಾ,<br>ಸರ್ಕಾರದ ಉಪ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ. | ನಿರ್ದೇಶಕರು |
| 6 | ಡಾ॥ ಕೆ.ಎನ್.ವಿಜಯಪ್ರಕಾಶ್,<br>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ), ಬೆಂಗಳೂರು | ನಿರ್ದೇಶಕರು |

**II.** **ನಿಗಮದ ಆಡಳಿತಾತ್ಮಕ ವ್ಯವಸ್ಥೆ:-**

ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 300 ಬಿಸಿಎ 2017, ದಿನಾಂಕ:27/01/2018ರ ಆದೇಶದನ್ವಯ ಈ ಕೆಳಕಂಡ 5 ಹುದ್ದೆಗಳನ್ನು ಕೇಂದ್ರ ಕಛೇರಿಗೆ ಮಾತ್ರ ಸೃಜಿಸಲಾಗಿರುತ್ತದೆ.

| ಕ್ರ ಸಂ | ಹುದ್ದೆಯ ಹೆಸರು | ವೃಂದ | ಸರ್ಕಾರ ಮಂಜೂರು ಮಾಡಿರುವ ಹುದ್ದೆಗಳು | ಭರ್ತಿ ಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|---|
| 1 | ವ್ಯವಸ್ಥಾಪಕ ನಿರ್ದೇಶಕರು | ಎ | 01 | – | 01 |
| 2 | ಕಂಪನಿ ಕಾರ್ಯದರ್ಶಿ | ಎ | 01 | – | 01 |
| 3 | ಲೆಕ್ಕಾಧಿಕಾರಿ | ಎ | 01 | – | 01 |
| 4 | ಪ್ರಥಮ ದರ್ಜೆ ಸಹಾಯಕರು | ಸಿ | 01 | – | 01 |
| 5 | ಡಾಟಾ ಎಂಟ್ರಿ ಆಪರೇಟರ್ | ಸಿ | 01 | – | 01 |
| 6 | ಗ್ರೂಪ್ ಡಿ | ಡಿ | 01 | – | 01 |
| | ಒಟ್ಟು | | 06 | – | 06 |

ಈ ಮೇಲ್ಕಂಡ 06 ಹುದ್ದೆಗಳು ಮಂಜೂರಾಗಿದ್ದು, ಇನ್ನೂ ಭರ್ತಿ ಮಾಡಿರುವುದಿಲ್ಲ. ದಿನಾಂಕ: 18/05/2017ರ ಆದೇಶದನ್ವಯ ವ್ಯವಸ್ಥಾಪಕ ನಿರ್ದೇಶಕರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಕಾರ್ಯಭಾರ ವಹಿಸಿಕೊಂಡು ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಸ್ಥಾಪನಾ ಕಾರ್ಯವನ್ನು ನಿರ್ವಹಿಸಿದ್ದಾರೆ.

**III.** **2020-21ನೇ ಸಾಲಿನ ಆಯವ್ಯಯ ಮತ್ತು ಕ್ರಿಯಾ ಯೋಜನೆ:-** ರಾಜ್ಯ ಸರ್ಕಾರವು 2020-21ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 4225-03-190-0-06-211ರಲ್ಲಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮಕ್ಕೆ **ರೂ.29.00ಲಕ್ಷಗಳ** ಷೇರು ಬಂಡವಾಳವನ್ನು ಮತ್ತು ಅನುದಾನ ಲೆಕ್ಕ ಶೀರ್ಷಿಕೆ 2225-03-190-0-08-106ರಲ್ಲಿ ರೂ.500.00ಲಕ್ಷ ಹೀಗೆ ಒಟ್ಟಾರೆ ರೂ.529.00ಲಕ್ಷಗಳನ್ನು ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಒದಗಿಸಿದೆ. ಈ ಮೊತ್ತದಲ್ಲಿ ಕೆಳಕಂಡಂತೆ ಯೋಜನೆಗಳಿಗೆ ಹಾಗು ಆಡಳಿತಾತ್ಮಕ ವೆಚ್ಚಕ್ಕೆ ಹಂಚಿಕೆ ಮಾಡಲಾಗಿರುತ್ತದೆ.

(ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಯೋಜನೆ | ಗುರಿ | |
|---|---|---|---|
| | | ಭೌತಿಕ | ಆರ್ಥಿಕ |
| 1 | ಸ್ವಯಂ ಉದ್ಯೋಗ ಸಾಲ ಯೋಜನೆ | 400 | 200.00 |
| 2 | ಗಂಗಾ ಕಲ್ಯಾಣ ನೀರಾವರಿ ಯೋಜನೆ | 100 | 250.00 |
| 3 | ಅರಿವು ಶೈಕ್ಷಣಿಕ ಸಾಲ ಯೋಜನೆ | 50 | 29.00 |
| 4 | ಆಡಳಿತಾತ್ಮಕ ವೆಚ್ಚ | – | 50.00 |
| | **ಒಟ್ಟು** | **550** | **529.00** |

**IV. ಯೋಜನೆಗಳ ವಿವರ:-**

ಉಪ್ಪಾರ ಮತ್ತು ಇದರ ಉಪಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಸೇರಿದ ಜನರ ಆರ್ಥಿಕಾಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಅನುದಾನದಿಂದ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತದಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಈ ರೀತಿ ಇದೆ.

1. **ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:** ಉಪ್ಪಾರ ಮತ್ತು ಇದರ ಉಪಜಾತಿಗಳಿಗೆ ಸೇರಿದ ಗ್ರಾಮಾಂತರ ಪ್ರದೇಶವರಿಗೆ ರೂ.98,000/- ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವವರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ, ಚಟುವಟಿಕೆಗಳಾದ ಸಣ್ಣ ವ್ಯಾಪಾರ, ಸೇವಾ ವಲಯ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗುವುದು.
   1. ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಟ ರೂ.10,000/-ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
   2. ಘಟಕ ವೆಚ್ಚ ರೂ.50.001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಟ ರೂ.20,000/-ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
   3. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಟ ರೂ.30,000/-ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

   2020-21ನೇ ಸಾಲಿಗೆ ರೂ.200.00ಲಕ್ಷಗಳ ಆರ್ಥಿಕ ಹಾಗೂ 400 ಭೌತಿಕ ಗುರಿ ನಿಗದಿಪಡಿಸಿದ್ದು, ಜನವರಿ-2021ರ ಅಂತ್ಯಕ್ಕೆ 272 ಫಲಾನುಭವಿಗಳಿಗೆ ರೂ.135.60ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ.

2. **ಅರಿವು-ಶೈಕ್ಷಣಿಕ ಸಾಲ ಹಾಗೂ ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ:-** ಉಪ್ಪಾರ ಮತ್ತು ಇದರ ಉಪಜಾತಿಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ಸಿ.ಇ.ಟಿ. ಮೂಲಕ ಪ್ರವೇಶ ಪಡೆದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ವಾರ್ಷಿಕ ಗರಿಷ್ಠ ರೂ.1.00ಲಕ್ಷ ಸಾಲ ಮಾಡಲಾಗುತ್ತಿದೆ. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ., ಪೋಸ್ಟ್ ಡಾಕ್ಟೋರಲ್ ಮತ್ತು ಮಾಸ್ಟರ್ ಡಿಗ್ರಿ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಇತ್ಯಾಧಧಿ ಉನ್ನತ ಕೋರ್ಸ್‌ಗಳಲ್ಲಿ ವಾಸಂಗ ಮಾಡಲು ವಾರ್ಷಿಕ ಗರಿಷ್ಠ ರೂ.5.00ಲಕ್ಷಗಳಂತೆ 3 ವರ್ಷಗಳ ಅವಧಿಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ರೂ.15.00ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

   2020-21ನೇ ಸಾಲಿಗೆ ರೂ.29.00ಲಕ್ಷಗಳ ಆರ್ಥಿಕ ಹಾಗೂ 50 ಭೌತಿಕ ಗುರಿ ನಿಗದಿಪಡಿಸಿದ್ದು, ಜನವರಿ-2021ರ ಅಂತ್ಯಕ್ಕೆ 89 ವಿದ್ಯಾರ್ಥಿಗಳಿಗೆ ರೂ.67.94ಲಕ್ಷಗಳ ಆರ್ಥಿಕ ನೆರವು ಒದಗಿಸಲಾಗಿರುತ್ತದೆ.

3. ಗಂಗಾ ಕಲ್ಯಾಣ ನೀರಾವರಿ ಯೋಜನೆ:-

**ವೈಯಕ್ತಿಕ ನೀರಾವರಿ ಯೋಜನೆ:** ಉಪ್ಪಾರ ಮತ್ತು ಇದರ ಉಪಜಾತಿಗಳಿಗೆ ಸೇರಿದ ವಾರ್ಷಿಕ ಆದಾಯ ರೂ.98000/-ಗಳ ಒಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿಗೆ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲಾಗುತ್ತಿದೆ. ಕೊಳವೆ ಬಾವಿ ಕೊರೆದು, ಪಂಪ್ ಮತ್ತು ಮೋಟಾರ್ ಸರಬರಾಜು ಮಾಡಿ ಹಾಗೂ ವಿದ್ಯುತ್ ಸಂಪರ್ಕ ಒದಗಿಸಲಾಗುತ್ತಿದೆ. ಈ ಯೋಜನೆಯಲ್ಲಿ ಘಟಕ ವೆಚ್ಚ ರೂ.2.50ಲಕ್ಷಗಳು ಅಗಿರುತ್ತದೆ. ಈ ಘಟಕ ವೆಚ್ಚದಲ್ಲಿ ರೂ.2.00ಲಕ್ಷ ಸಹಾಯಧನ ಹಾಗೂ ಶೇ.4ರ ಬಡ್ಡಿದರದಲ್ಲಿ ರೂ.0.50ಲಕ್ಷಗಳ ಸಾಲ ಒಳಗೊಂಡಿರುತ್ತದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಜಿಲ್ಲೆಗಳಲ್ಲಿ ವೈಯಕ್ತಿಕ ಕೊಳವೆ ಬಾವಿಯ ಘಟಕ ವೆಚ್ಚ ರೂ.4.00ಲಕ್ಷಗಳು, ಇದರಲ್ಲಿ ರೂ.3.50ಲಕ್ಷಗಳ ಸಹಾಯಧನ ಹಾಗೂ ರೂ.50000/-ಗಳ ಸಾಲವಾಗಿರುತ್ತದೆ.

ಸದರಿ ಯೋಜನೆಯಡಿಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಪ್ರತಿ ಕೊಳವೆ ಬಾವಿಗಳಿಗೆ ತಲಾ ರೂ.50000/-ಗಳನ್ನು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ಪಾವತಿಸಲಾಗುತ್ತಿದೆ.

2020-21ನೇ ಸಾಲಿಗೆ ರೂ.250.00ಲಕ್ಷಗಳ ಆರ್ಥಿಕ ಹಾಗೂ 100 ಭೌತಿಕ ಗುರಿ ನಿಗದಿಪಡಿಸಿದ್ದು, ಜನವರಿ-2021ರ ಅಂತ್ಯಕ್ಕೆ 80 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ರೂ.160.00ಲಕ್ಷಗಳ ಆರ್ಥಿಕ ನೆರವಿನಿಂದ ನೀರಾವರಿ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ.

**ಫಲಾನುಭವಿಗಳ ಆಯ್ಕೆ:-** ಈ ಮೇಲ್ಕಂಡ ಯೋಜನೆಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

## V. 2020-21ನೇ ಸಾಲಿನ ಪ್ರಗತಿ:-

ನಿಗಮದಿಂದ 2020-21ನೇ ಸಾಲಿನ ಯೋಜನೆಗಳಿಗೆ ನಿಗದಿಪಡಿಸಿದ ಗುರಿ ಹಾಗೂ ಜನವರಿ-2021ರ ಅಂತ್ಯದವರೆಗೆ ಸಾಧಿಸಿದ ಪ್ರಗತಿ

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ಯೋಜನೆ ಹೆಸರು | ಗುರಿ | | ಸಾಧನೆ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಸ್ವಯಂ ಉದ್ಯೋಗ ಸಾಲ ಯೋಜನೆ | 400 | 200.00 | 272 | 135.60 |
| 2 | ಅರಿವು ಶೈಕ್ಷಣಿಕ ಸಾಲ ಯೋಜನೆ | 50 | 29.00 | 89 | 67.94 |
| 3 | ಗಂಗಾ ಕಲ್ಯಾಣ ಯೋಜನೆ | 100 | 250.00 | 80 | 160.00 |
| 4 | ಆಡಳಿತಾತ್ಮಕ ವೆಚ್ಚ | - | 50.00 | - | 2.61 |
| | **ಒಟ್ಟು** | **550** | **529.00** | **441** | **366.15** |

- ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಕಳೆದ ಸಾಲಿನ ಈ ಯೋಜನೆಯ ಉಳಿಕೆ ಮೊತ್ತದಿಂದ ರೂ.38.94ಲಕ್ಷಗಳನ್ನು ಹೆಚ್ಚುವರಿಯಾಗಿ (2ನೇ ಕಂತಿನ ಸಾಲ) ವೆಚ್ಚ ಮಾಡಿದೆ.

ವ್ಯವಸ್ಥಾಪಕ ನಿರ್ದೇಶಕರು.

# KARNATAKA UPPARA DEVELOPMENT CORPORATION

**(Karnataka Government undertaking)**

* * *

## Performance Report for the year 2020-21

Karnataka Uppara Development Corporation was established on 31/10/2017 under the Companies Act, 2013 as per the Government Order No.BCW 124 BCA 2017, dt:18/05/2017 and 12/10/2017. The objectives of the Corporation is to promote economic and development activities and to assist the poorer sections of backward classes belonging to Uppara and their sub castes in skill development and self-employment ventures.

The Annual Report of Karnataka Uppara Development Corporation for the year 2020-21 comprises the following.

1. Board of Directors of the Corporation.
2. Administrative set-up of the Corporation
3. Budget allocation for the year 2020-21
4. Details of the Schemes.
5. Progress Report for 2020-21.

### I. Board of Directors of the Corporation:

The Corporation is having by Board of Directors which is the policy making and supervisory body. It consists of the following members:

| Sl. No | Name | Designation |
|---|---|---|
| 1 | Sri.Girish Uppar<br>Chairman of Karnataka Uppara Development Corporation Ltd | Chairman |
| 2 | Smt. V.Rashmi Mahesh I.A.S.<br>Principal Secretary to Government, Backward Classes Welfare Department | Director |
| 3 | Sri.Vasanth Kumar.P I.A.S.<br>Commissioner, Backward Classes Welfare Department | Director |
| 4 | Sri.D.S.Sudharshan Kumar<br>Deputy Secretary to Government (Welfare) Finance Department. | Director |
| 5 | Smt. C.Hemalatha<br>Deputy Secretary to Government, (Department of Public Enterprises). | Director |
| 6 | Dr.K.N.Vijayaprakash, Managaing Director, Karnataka Uppara Development Corporation Ltd. | Director |

## II. Administrative set-up of the Corporation

Managing Director is the Chief Executive Officer of the Corporation. Government has sanctioned the following 6 posts Karnataka Uppara Development Corporation vide Govt. Order No.BCW 300 BCA 2017, dt:27/01/2018.

| Sl No | Name of the Posts | Grade | No of Post Sanctioned | No. of Post Filled | No. of Posts Vacant |
|---|---|---|---|---|---|
| 1 | Managing Director | A | 01 | - | 01 |
| 2 | Company Secretary | A | 01 | - | 01 |
| 3 | Accounts Officer | A | 01 | - | 01 |
| 4 | First Division Assistant | C | 01 | - | 01 |
| 5 | Data Entry Operater | C | 01 | - | 01 |
| 6 | Group D | D | 01 | - | 01 |
| | **Total** | | 06 | - | 06 |

The above 06 posts are vacant. As per Govt. Order dt:18/05/2017 Managing director of D.Devraj Urs Backward Classes Development Corporation his holding additional charge of Managing Director of Karnataka Uppara Development Corporation and executing the administration of Karnataka Uppara Development Corporation Ltd.

**III. Budget and Action plan for 2020-21:-** The State Govt. has provided **Rs.29.00lakh** in the Budget in the head of account 4225-03-190-06-211 towards the Share Capital and Rs.500.00lakh Grants in the head of account 2225-03-190-0-08-106. Rs.529.00lakh is allocated to the schemes as follows:

**(Rs.in Lakhs)**

| Sl. No. | Name of The Scheme | Target | |
|---|---|---|---|
| | | Physical | Financial |
| 1 | Self Employment loan and subsidy schemes | 400 | 200.00 |
| 2 | Ganga Kayana Irrigation scheme | 100 | 250.00 |
| 3 | Arivu Education loan | 50 | 29.00 |
| 4 | Administration Cost | - | 50.00 |
| | **TOTAL** | **550** | **529.00** |

8/1/6

## IV. Details of the Schemes being implemented by the Corporation with share capital and subsidy amount provided by State Government:

The following schemes are being implemented by the Corporation for the economic development of the backward classes.

### 1. Self employment Direct loan and subsidy Scheme:-

A financial assistance upto Rs. 2,00,000/- per beneficiary is being sanctioned to the members belonging to Uppara and their sub castes, whose annual family income is below Rs.98000/- in rural and Rs.120000/- in urban area to enable them to take up self-employment activities such as petty business, service and agricultural and allied activities. The Corporation is extending the financial assistance which is as follows:

a. For the project cost upto Rs.50,000/-, 30% or a maximum of Rs.10,000/- subsidy and Rs.40,000/- is loan at 4% interest per annum.
b. For the project cost from Rs.50,001/- to Rs.1,00,000/-, 20% or a maximum of Rs.20,000/- subsidy and Rs.80,000/- is loan at 4% interest per annum.
c. For the project cost from Rs.1,00,000/- to Rs.2,00,000/-, 15% with a minimum of Rs.20,000/- and a maximum of Rs.30,000/- subsidy and remaining amount is loan at 4% per annum.

During the year 2020-21, an amount of 135.60 lakh against the target of Rs.200.00 lakh has been spent benefitting 272 Uppara Communities against the target of 400 upto the end of January-2021.

### 2. Arivu-Education Loan Scheme:

The Corporation extends educational loan to the students of these communities belonging to Uppara Community who are studying in the field of Medical and Engineering and other professional courses. The Corporation releases an amount of Rs1.00lakh per year or actual cost incurred by the student towards admission fees, tuition fee, laboratory fee, examination fee etc. for his/her education. The rate of interest is 2% per annum.

During the year 2020-21, an amount of 67.94 lakh against the target of Rs.29.00 lakh has been spent benefitting 89 Students belong to Uppara Communities against the target of 50 students upto the end of January-2021.

### 3. Ganga Kalyana Irrigation Scheme

**Individual irrigation:** This scheme is being implemented by the Corporation to provide irrigation facilities to the farmers belonging to Uppara and their sub castes. The eligibility conditions are that the applicant should belong to small and marginal farmer and his family income should not exceed Rs.98000/- per annum. The maximum unit cost fixed is Rs.2.50 lakh. Out of which Rs.2.00 lakh is subsidy and Rs.0.50lakh is loan at 4% rate of interest. The Corporation is drilling the borewell in the land of eligible farmers, supply pumpsets, accessories Rs.50,000/- per borewell is being released to the Electricity Supply Companies for energisation of borewell. The Maximum unit cost is Rs.4.00 lakh in Bangalore Rural, Bangalore Urban, Tumkur, Kolar, Chikkabalpura and Ramanagar districts. The unit cost includes Rs.3.50lakh subsidy and Rs.0.50 lakh loan.

During the year 2020-21, an amount of 160.00 lakh against the target of Rs.250.00 lakh has been spent benefitting 80 Uppara Communities against the target of 100 upto the end of January-2021.

## V. Progress during the year 2020-21:-

Target and Achievment for the year 2020-21 upto the end of January-2021.

**(Rs. In lakhs)**

| SI.No. | Name of the Scheme | Target | | Achievement | |
|---|---|---|---|---|---|
| | | Phy | Fin. | Phy | Fin. |
| 1 | Self Employment loan scheme | 400 | 200.00 | 272 | 135.60 |
| 2 | Arivu Education loan scheme | 50 | 29.00 | 89 | 67.94 |
| 3 | Ganga Kalyana scheme | 100 | 250.00 | 80 | 160.00 |
| 4 | Administration Cost | - | 50.00 | - | 2.61 |
| | **Total** | **550** | **529.00** | **441** | **366.15** |

- Rs.38.94 lakhs excess expenditure was incurred out of previous year balance of Arivu Education Loan.

Managing Director